ತೊಡಗಿದರು. ಈ ರೀತಿ ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತಿರುವ ಶತ್ರುದೇಶವಾದ ಪಾಕಿಸ್ತಾನವನ್ನು ಭೂಮಿಯಿಂದ ನಾಮಾವಶೇಷ ಮಾಡಿಬಿಡಬೇಕೆಂದು ಎಲ್ಲರೂ ಕ್ರೋಧದಿಂದ ಹೇಳುತ್ತಿದ್ದರು. ಬಾಬಣ್ಣನು ಯುದ್ಧದಲ್ಲಿ ಸತ್ತು ಈಗಾಗಲೇ ಎರಡು ದಿನವಾಗಿದ್ದು, ಆತನ ಪಾರ್ಥಿವ ಶರೀರವನ್ನು ತರಲು ಎಲ್ಲಾ ವ್ಯವಸ್ಥೆ ಆಗಿತ್ತು. ಅದು ಇನ್ನೇನು ಕೆಲವೇ ನಿಮಿಷಗಳಲ್ಲಿ ಸೋಮನಹಳ್ಳಿಗೆ ತಲುಪಲಿದೆ ಎಂಬ ಸಂದೇಶವು ಬಂತು.

ಅತ್ತುಅತ್ತು ಕಣ್ಣಿನಲ್ಲಿ ನೀರೇ ಇಂಗಿಹೋದವಳಂತೆ ಸುಬ್ಬಮ್ಮ ಸುಮ್ಮನೆ ಕುಳಿತಿದ್ದಳು. ಊರಿನ ಹಲವು ಹೆಂಗಸರು ಸುಬ್ಬಮ್ಮನಿಗೆ ನೀರು ಕುಡಿಸಲು, ಜ್ಯೂಸ್ ಕುಡಿಸಲು ವ್ಯರ್ಥ ಪ್ರಯತ್ನ ಮಾಡುತ್ತಿದ್ದರು. ಸುಬ್ಬಮ್ಮನನ್ನು ತಬ್ಬಿಕೊಂಡು ಕುಸುಮಾ ಒಂದೇ ಸಮನೆ ರೋದಿಸುತ್ತಿದ್ದಳು. ಕುಸುಮಾ ಮತ್ತು ಬಾಬು ಮೊದಲಿನಿಂದಲೂ ಒಬ್ಬರನ್ನೊಬ್ಬರು ಇಷ್ಟಪಟ್ಟಿದ್ದರು. ಈ ವರ್ಷ ಬಾಬುವಿಗೆ ಕುಸುಮಾಳನ್ನು ಕೊಟ್ಟು ಮದುವೆ ಮಾಡಬೇಕೆಂದು ಸುಬ್ಬಮ್ಮ ಕುಸುಮಾಳ ತಾಯಿಯೊಂದಿಗೆ ಚರ್ಚಿಸಿ, ನಿಶ್ಚಯಿಸಿದ್ದಳು. ಅಷ್ಟರಲ್ಲಿ ವಿಧಿಯು ಹೀಗೆ ಸಂಚು ಮಾಡಿ ಅವನನ್ನು ಹೊತ್ತೊಯ್ಯುತ್ತದೆ ಎಂದು ಯಾರಿಗೆ ಗೊತ್ತಿತ್ತು? ಸುತ್ತಮುತ್ತಲಿನ ಊರಿನ ಜನರೆಲ್ಲಾ ಈಗಾಗಲೇ ಸುಬ್ಬಮ್ಮನ ಮನೆಯ ಹತ್ತಿರ ನೆರೆದಿದ್ದರು. ಅವರನ್ನು ಕಂಟ್ರೋಲ್ ಮಾಡಲು ಎರಡು ವ್ಯಾನ್‌ನಲ್ಲಿ ಬಂದಿದ್ದ ಪೊಲೀಸರು ಹೆಣಗಾಡುತ್ತಿದ್ದರು. ತಾಲ್ಲೂಕಿನ ಸಕಲ ರಾಜಕೀಯ ಮುಖಂಡರೂ ಬಂದು ಸುಬ್ಬಮ್ಮಳನ್ನು ಸಂತೈಸುವುದೂ, ಟಿವಿ ಚಾನೆಲ್‌ನವರು ಹಾಕಿ ಇದನ್ನೆಲ್ಲಾ ಪ್ರಸಾರ ಮಾಡುವುದು ನಡೆಯುತ್ತಲಿತ್ತು. ಬಂದ ದೊಡ್ಡ ದೊಡ್ಡ ರಾಜಕೀಯ ನಾಯಕರನ್ನು ಸೋಮನ ಹಳ್ಳಿಯ ರಾಜಕೀಯ ಮುಖಂಡರಾದ ರಾಮೇ ಗೌಡರು ಮತ್ತು ಅವರ ಮಗ ಚೇರ್ಮನ್ ಚಿನ್ನಪ್ಪ ಸ್ವಾಗತಿಸಿ, ಅವರಿಗೆ ಬೇಕಾದ ವ್ಯವಸ್ಥೆಯನ್ನು ಮಾಡುತ್ತಿದ್ದರು. ಬಂದ ರಾಜಕೀಯ ಮುಖಂಡರು, ಟಿವಿ ಚಾನೆಲ್‌ನವರಿಗೆ ತಮ್ಮ ಸಂತಾಪದ ನುಡಿಗಳನ್ನು ಹೇಳಿದ ನಂತರ ರಾಮೇಗೌಡರ ಮನೆಗೆ ಹೋಗಿ ಟೀ, ಉಪಾಹಾರಗಳನ್ನು ಸ್ವೀಕರಿಸುತ್ತಿದ್ದರು.

ರಾಮೇಗೌಡರ ಮಗ ಚಿನ್ನಪ್ಪ ಮತ್ತು ಸುಬ್ಬಮ್ಮನ ಮಗ ಬಾಬಣ್ಣ ತಮ್ಮ ಓದನ್ನು ಮುಗಿಸಿದ ನಂತರ ಹಳ್ಳಿಯಲ್ಲಿಯೇ ನೆಲೆಸಿದ್ದರು. ಚಿನ್ನಪ್ಪನು ಹೊಲಗದ್ದೆಗಳನ್ನು ನೋಡಿಕೊಂಡು, ತನ್ನ ತಂದೆಯಿಂದ ರಾಜಕೀಯದ ಪಟ್ಟುಗಳನ್ನು ಕಲಿಯುತ್ತಿದ್ದರೆ, ಬಾಬಣ್ಣನು ಸಣ್ಣಪುಟ್ಟ ಕೆಲಸ ಮಾಡುತ್ತಾ, ತನ್ನ ಹಳ್ಳಿಯ ಜನರ ಅರ್ಜಿಗಳನ್ನು ಬರೆಯುವುದು, ತಾಲ್ಲೂಕು ಆಫೀಸ್‌ಗಳ ಕೆಲಸ ಕಾರ್ಯಗಳಲ್ಲಿ ನೆರವಾಗುವುದು, ಹಳ್ಳಿಯಲ್ಲಿ ಆರೋಗ್ಯ ಶಿಬಿರಗಳನ್ನು ಆಯೋಜಿಸಿ, ಮೂಢ ನಂಬಿಕೆ ಮತ್ತು ಕಂದಾಚಾರಗಳ ವಿರುದ್ಧ ತಿಳಿವಳಿಕೆ ನೀಡುವುದನ್ನು ಮಾಡುತ್ತಾ, ಹಳ್ಳಿಯ ಸಕಲ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ, ಎಲ್ಲರಿಗೂ ಬೇಕಾದವನಾಗಿ ಜನಪ್ರಿಯನಾಗಿದ್ದ. ಅಷ್ಟಕ್ಕೂ ಬಾಬಣ್ಣ ಸೈನ್ಯಕ್ಕೆ ಸೇರಿದ್ದೇ ಒಂದು ಆಕಸ್ಮಿಕ. ನಿಜಕ್ಕೂ ನೋಡಿದರೆ ಈ ಕೆಲಸಕ್ಕೆ ಚಿನ್ನಪ್ಪನು ಹೋಗಬೇಕಿತ್ತು. ಸೈನ್ಯಕ್ಕೆ ಸೇರಲು ಅಪ್ಲಿಕೇಷನ್ ತಂದಿದ್ದ ಚಿನ್ನಪ್ಪನು ಅದನ್ನು ಭರ್ತಿ ಮಾಡದೆ ಹಾಗೇ ಇಟ್ಟುಕೊಂಡಿದ್ದನು. ಅಷ್ಟರಲ್ಲಿ ಪಂಚಾಯಿತಿ ಚುನಾವಣೆ ಪ್ರಕಟಣೆಯಾಗಿ, ಜನರ ಒತ್ತಾಯಕ್ಕೆ ಕಟ್ಟುಬಿದ್ದು ಬಾಬಣ್ಣನು ಸ್ಪರ್ಧಿಸಲು ಒಪ್ಪಿದ್ದನು. ಆದರೆ ಚುನಾವಣೆಗೆ ನಾಮಪತ್ರ ಸಲ್ಲಿಸಬೇಕಾದ ಹಿಂದಿನ ದಿನ ಬಾಬಣ್ಣ ಮತ್ತು ಸುಬ್ಬಮ್ಮನನ್ನು ಮನೆಗೆ ಕರೆಸಿಕೊಂಡ ರಾಮೇಗೌಡರು ಅವರಿಗೆ ತಿನ್ನಲು ತಿಂಡಿಕೊಟ್ಟು, ಇಬ್ಬರನ್ನೂ ತಾರಾಮಾರಿ ಹೊಗಳತೊಡಗಿದರು. ಎಂದೂ ಈ ರೀತಿ ಮನೆಗೆ ಕರೆಸಿ, ತಮಗೆ ಸಮವಾಗಿ ಕುಳ್ಳಿರಿಸಿಕೊಂಡು ಮಾತನಾಡದ ಗೌಡರು ಈಗ ಮಾಡುತ್ತಿರುವುದನ್ನು ಕಂಡು ಸುಬ್ಬಮ್ಮನಿಗೆ ಆಶ್ಚರ್ಯವಾಯಿತು. ರಾಮೇಗೌಡರು ಮಾತನಾಡುತ್ತಾ, ತನ್ನ ಮಗ ಚಿನ್ನಪ್ಪ ಮತ್ತು ಬಾಬುವಿನ ಸ್ನೇಹವನ್ನು

